ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 92/2017

(ಫ್ರಾಸಾ-2 ಚಾಸಾ-2)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 15.10.2024.

| | | |
|---|---|---|
| ಸಾಕ್ಷಿದಾರರ ಹೆಸರು | - | ಮನೋಜ್ |
| ತಂದೆಯ ಹೆಸರು | - | ಕೃಷ್ಣಪ್ಪ |
| ವಯಸ್ಸು | - | 26 ವರ್ಷ, |
| ಉದ್ಯೋಗ | - | ಖಾಸಗಿ ಕೆಲಸ |
| ವಾಸ | - | ಆನೇಕಲ್ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಮೃತ ಪ್ರಭು ನನಗೆ ಗೊತ್ತಿಲ್ಲ. ಚಾಸಾ-3 ರಿಂದ 5 ಗೊತ್ತಿಲ್ಲ. ಚರಣ್ ನನಗೆ ಗೊತ್ತಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ಈ ಹಿಂದೆ ನೋಡಿಲ್ಲ. ನಾನು ಯಾವುದೇ ಗಲಾಟೆಯನ್ನು ನೋಡಿರುವುದಿಲ್ಲ. ಪೋಲಿಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್ ಪಿಪಿ ರವರು ವಿನಂತಿಸಿದ್ದರಿಂದ ಸಾಕ್ಷಿಯ ಹೇಳಿಕೆ ಹಾಗೂ ಇತರೆ ನ್ಯಾಯಾಲಯದ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

2. ಚಾಸಾ-3 ರಿಂದ 5 ಮತ್ತು ಮೃತ ಪ್ರಭು ನನ್ನ ಸ್ನೇಹಿತರು ಎಂದರೆ ಸರಿಯಲ್ಲ. ದಿಃ28.12.2016 ರಂದು ಮಧ್ಯಾಹ್ನ ಚರಣನು ಸಿಪಾಯಿ ಗಲ್ಲಿಯ ಹತ್ತಿರ ನಮ್ಮೊಂದಿಗೆ ಜಗಳ ಮಾಡಿ ಪ್ರಭುವಿಗೆ ಜಾತಿ ನಿಂದನೆ ಮಾಡಿದ್ದನು ಎಂದರೆ ಸರಿಯಲ್ಲ. ಅದೇ ದಿನ ರಾತ್ರಿ 07.30 ಕ್ಕೆ 8 ನೇ ಆರೋಪಿ ನನ್ನ ಮಗನನ್ನು ಯಾಕೆ ಬೈದಿದ್ದೀರಿ ಎಂದು ನಮಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮೃತ ಪ್ರಭು ಇವರು

8 ನೇ ಆರೋಪಿಯ ಮಗನಾದ ಚರಣ್ ಗೆ ನಿನಗೆ ಕೊಬ್ಬು ಜಾಸ್ತಿಯಾಗಿದೆ ಎಂದು ಬೈದಿರುತ್ತಾನೆ ಎಂದರೆ ಸರಿಯಲ್ಲ. ಅದೇ ರಾತ್ರಿ ಮತ್ತೆ 09.30 ಕ್ಕೆ ನಮ್ಮ ಮತ್ತು ಅವರ ಮಧ್ಯೆ ಜಗಳ ಆಗಿದೆ ಎಂದರೆ ಸರಿಯಲ್ಲ. ದಿಃ29.12.2016 ರಂದು ರಾತ್ರಿ 09.45 ಘಂಟೆಗೆ ಮೃತ ಪ್ರಭು, ನಾನು, ಚಾಸಾ-3 ರಿಂದ 5 ರವರು ಐಶ್ವರ್ಯ ಬಾರ್ ಆಂಡ್ ರೆಸ್ಟೋರೆಂಟ್ ನಲ್ಲಿ ಊಟ ಮಾಡೋಣವೆಂದು ಹೋಗಿದ್ದು ಬಾರ್ ನ ಮುಂಭಾಗದಲ್ಲಿರುವ ಅಂಡರಗ್ರೌಂಡ್ ಸಂದಿಯಲ್ಲಿ ನಿಂತಿದ್ದಾಗ 1 ನೇ ಆರೋಪಿ ಊಟ ಮಾಡಲು ಬಂದಿದ್ದೀರಾ ಎಂದು ನಮ್ಮನ್ನು ಮಾತನಾಡಿಸಿದ್ದು 2 ರಿಂದ 7 ನೇ ಆರೋಪಿತರು ಏಕಾಏಕಿ ಲಾಂಗ್, ಡ್ರಾಗರ್, ಚಾಕುಗಳಿಂದ ಪ್ರಭುವಿನ ಹೊಟ್ಟೆಗೆ, ಎದೆಗೆ ಚುಚ್ಚಿದರು ಎಂದರೆ ಸರಿಯಲ್ಲ. ಆಗ ನಾವು ಜೋರಾಗಿ ಕಿರುಚಿಗೊಂಡಿದ್ದು ಬಿಡಿಸಲು ಹೋದಾಗ ನಮಗೂ ಸಹ ಡ್ರಾಗರ್ ನಿಂದ ಚುಚ್ಚಲು ಬಂದಿದ್ದು ನಾವು ಭಯದಿಂದ ಮೆಟ್ಟಿಲು ಹತ್ತುತ್ತಿದ್ದಾಗ 8 ನೇ ಆರೋಪಿ ಇವರನ್ನು ಬಿಡಬೇಡಿ ಎಂದು ಕತ್ತು ಕುಯ್ದು ಹಾಕಿ ಎಂದು ಕಿರುಚುತ್ತಿದ್ದ ಎಂದರೆ ಸರಿಯಲ್ಲ. ನಾವು ಬೇಡ ಎಂದು ಕೇಳಿಕೊಂಡರೂ ಸಹ ನಮ್ಮನ್ನು 8 ನೇ ಆರೋಪಿ ಅಂಡಗ್ರೌಂಡ್ ಗೆ ತಳ್ಳಿರುತ್ತಾರೆ ಎಂದರೆ ಸರಿಯಲ್ಲ. ನಾವು ಅಲ್ಲಿಂದ ತಪ್ಪಿ ಸಿಕೂಂಡುಕಿ ಹೋಗಿ ಪ್ರಭು ಅವರ ಅಣ್ಣ ಮತ್ತು ಸಂಬಂಧಿಕರಿಗೆ ವಿಚಾರ ತಿಳಿಸಿ ಪುನಃ ಬಾರ್ ಹತ್ತಿರ ಬಂದು ರಕ್ತದ ಮಡುವಿನಲ್ಲಿ ಇದ್ದ ಪ್ರಭುವನ್ನು ಆಸ್ಪತ್ರೆಗೆ ಸಾಗಿಸೋಣ ಎಂದು ನೋಡಿದಾಗ ಪ್ರಭುವಿನ ಕತ್ತನ್ನು ಅರ್ಧ ಭಾಗ ಕುಯ್ದಿದ್ದು ಪ್ರಭು ಸತ್ತು ಹೋಗಿದ್ದನು ಎಂದರೆ ಸರಿಯಲ್ಲ. ನಾವು ಭಯದಿಂದ ತಕ್ಷಣ ಅಲ್ಲಿಂದ ಹೊರಟು ಹೋಗಿರುತ್ತೇವೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ "ಇದೇ ಆನೇಕಲ್ ಟೌನ್ ಜಯಭೀಮ ನಗರದ ------------ ಭಯದಿಂದ ಅಲ್ಲಿಂದ ತಕ್ಷಣ ಹೊರಟು ಹೋದೆವು" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿತರನ್ನು ನಾನು ಈ ಹಿಂದೆ ನೋಡಿರುತ್ತೇನೆ ಎಂದರೆ ಸರಿಯಲ್ಲ.

3. ಮೃತ ಪ್ರಭು ನನ್ನ ಸ್ನೇಹಿತನಾಗಿದ್ದರೂ ಸಹ, ಆತನ ಕೊಲೆಯನ್ನು ನಾನು ಸ್ವತಃ ನೋಡಿದ್ದರೂ ಸಹ, ನಾನು ನಿಪಿ-4 ರಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದರೂ ಸಹ ನಾನು

ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಜೆ ವೈ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ತಿಳಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು